

ಶ್ರೀಮಂತರಿಗೆ ಮಾತ್ರ ಎನ್ನುವ ಕಲ್ಪನೆ ಅನೇಕರಿಗೆ ಇದೆ. ಆದರೆ ಇದು ಅರ್ಧ ಸತ್ಯ. ಇಲ್ಲಿ 'ಕಾಸಿಗೆ ತಕ್ಕ ಕಜ್ಜಾಯ' ಸಿಗುತ್ತದೆ. ನೀವು ಹಣಕಾಸಿನ ವಿಷಯದಲ್ಲಿ ಗಟ್ಟಿಯಾಗಿದ್ದೀರಿ ಎಂದರೆ ಎಂಥ ವೈಭವದ ತಯಾರಿಯನ್ನು ಬೇಕಾದರೂ ಅವರು ಮಾಡಿಕೊಡುತ್ತಾರೆ. ಹಾಗೆಯೇ ನಿಮ್ಮ ಬಜೆಟ್ ಕಮ್ಮಿ ಇದ್ದರೆ ಅದಕ್ಕೂ ಹೊಂದುವ ಪ್ಲ್ಯಾನ್‌ಗಳು ಅವರ ಬಳಿ ಸಿದ್ಧವಾಗಿರುತ್ತವೆ.

ಬೆಂಗಳೂರು ಹಾಗೂ ಮೈಸೂರಿನಲ್ಲಿ ಸಕ್ರಿಯವಾಗಿರುವ ವೆಡ್ಡಿಂಗ್ ಪ್ಲ್ಯಾನರ್ ಸಂಸ್ಥೆ 'ಪಾಣಿಗ್ರಹಣ'. ಸದ್ಯ ವಿದೇಶದಲ್ಲಿಯೂ ಇವರು ತಮ್ಮ ಕಾರ್ಯವ್ಯಾಪ್ತಿಯನ್ನು ವಿಸ್ತರಿಸಿಕೊಳ್ಳುತ್ತಿದ್ದಾರೆ. 'ಪಾಣಿಗ್ರಹಣ'ದ ನಿರ್ದೇಶಕಿ ಸಿಂಚನಾ ಭಟ್ ಅವರನ್ನು ಮಾತಿಗೆಳೆದಾಗ ಇಂದಿನ ಮದುವೆಯ ಟ್ರೆಂಡ್ ಕುರಿತು ಹಲವು ಕುತೂಹಲಕಾರಿ ಅಂಶಗಳು ಜಾಹೀರಾದವು.



ಸಿಂಚನಾ ಭಟ್

'ಮದುವೆ ಎನ್ನುವುದು ಸ್ಟೇಟಸ್ ತೋರಿಸಿಕೊಳ್ಳುವ ಕಾರ್ಯಕ್ರಮವಾಗಿಯೂ ಜನಪ್ರಿಯತೆ ಪಡೆದುಕೊಳ್ಳುತ್ತಿದೆ. ಗ್ರಾಹಕರ ಬಜೆಟ್‌ಗೆ ಅನುಗುಣವಾಗಿ ನಾವು ಸಿದ್ಧತೆ ಮಾಡಿಕೊಡುತ್ತೇವೆ. ಅವರು ನೀಡುವ ಹಣಕ್ಕೆ ಯಾವ ರೀತಿಯ ವಿನ್ಯಾಸ ಮಾಡಿಕೊಡುತ್ತೇವೆ ಎನ್ನುವುದನ್ನು ಪ್ಲಾನ್ ಮಾಡಿ 3ಡಿ ಮಾಡೆಲ್ ಮಾಡಿ ತೋರಿಸುತ್ತೇವೆ. ಹೀಗಾಗಿ ಗೊಂದಲ ಇರದು. ಸೀಮಿತ ಕೆಲಸದ ಜವಾಬ್ದಾರಿ ನಿರ್ವಹಿಸಿಕೊಡಿ ಎಂದರೆ ಆ ವ್ಯವಸ್ಥೆಯೂ ನಮ್ಮಲ್ಲಿ ಇದೆ. ಹೀಗಾಗಿ ಖರ್ಚು ಮಾಡುವ ಸಾಮರ್ಥ್ಯಕ್ಕನುಗುಣವಾಗಿ ಅತ್ಯುತ್ತಮ ಸೇವೆ ನಾವು ನೀಡುತ್ತೇವೆ' ಎನ್ನುತ್ತಾರೆ ಅವರು.

'ಕಲ್ಯಾಣ ಮಂಟಪಗಳಲ್ಲಿ ಹೆಚ್ಚಾಗಿ ಅವರದ್ದೇ ಆದ ವ್ಯವಸ್ಥೆ ಇರುತ್ತದೆ. ರೆಸಾರ್ಟ್ ಅಥವಾ ಬೇರೆ ಬೇರೆ ಸ್ಥಳಗಳಲ್ಲಿ ಮದುವೆ ಮಾಡುವವರು ಹೆಚ್ಚಾಗಿ ವೆಡ್ಡಿಂಗ್ ಪ್ಲ್ಯಾನರ್‌ಗಳನ್ನು ಹೈರ್ ಮಾಡ್ತಾರೆ. ಎಷ್ಟೋ ಸಲ ಇಷ್ಟು ಹಣ ಕೊಡ್ತೀವಿ, ಸ್ಟೇಜ್ ಡೆಕೋರೇಶನ್ ಮಾಡಿದ್ರೆ ಸಾಕು ಅಂತಾರೆ. ಕೊನೆಗೆ ಇಷ್ಟೇನಾ ಮಾಡಿದ್ದು, ಅಲ್ಲಿ ಖಾಲಿ ಅನಿಸ್ತಿದೆ, ಹೀಗೆ ಮಾಡಬೇಕಿತ್ತು ಎಂದೆಲ್ಲ ಕಮೆಂಟ್ ಮಾಡುವವರೂ ಇರುತ್ತಾರೆ. ಇನ್ನೂ ಎಲ್ಲ ವ್ಯವಸ್ಥೆ ಬೇಕು ಎನ್ನುವವರೂ ಇರುತ್ತಾರೆ.

ಮೊದಲು ಅವರು ದಕ್ಷಿಣ ಭಾರತೀಯರೇ, ಉತ್ತರ ಭಾರತೀಯರೆ ಎಂದು ತಿಳಿದು ಅವರ ಮನೋಧರ್ಮಕ್ಕೆ ತಕ್ಕಂಥ ಎಲ್ಲ ವ್ಯವಸ್ಥೆಯನ್ನು ಪ್ಲ್ಯಾನ್ ಮಾಡುತ್ತೇವೆ. ಸಂಗೀತ, ಮೆಹೆಂದಿ ಶಾಸ್ತ್ರ ಎನ್ನುವ ಕಲ್ಪನೆ ಉತ್ತರ ಭಾರತದಲ್ಲಿ ಜಾಸ್ತಿ. ಇಲ್ಲಿ ಕಲರ್ ಥೀಂ ಮುಖ್ಯ ಪಾತ್ರ ವಹಿಸುತ್ತದೆ' ಎಂದು ಮಾಹಿತಿ ನೀಡುತ್ತಾರೆ ಮತ್ತಿಕೆರೆಯ 'ಶುಭ ಮುಹೂರ್ತ' ವೆಡ್ಡಿಂಗ್ ಪ್ಲಾನರ್ಸ್‌ನ ಅಮೃತಾ.

## ಮದುವೆ ನಡೆಯೋದೆಲ್ಲಿ?

ಡೆಸ್ಟಿನೇಶನ್ ವೆಡ್ಡಿಂಗ್ ಇಂದಿನ ಟ್ರೆಂಡ್. ಕಲ್ಯಾಣ ಮಂಟಪ, ದೇವಸ್ಥಾನಗಳಂಥ ಸಾಂಪ್ರದಾಯಿಕ ಸ್ಥಳಗಳನ್ನು ಬಿಟ್ಟು ಯಾವುದೋ ವಿಶೇಷ ಜಾಗದಲ್ಲಿ ಮದುವೆ ಮಾಡಿಕೊಳ್ಳುವ ಟ್ರೆಂಡ್ ಇದು. ಅತಿ ಆಪ್ತರಿಗಷ್ಟೇ ಇಲ್ಲಿ ಆಹ್ವಾನವಿರುತ್ತದೆ. ವಿದೇಶದಲ್ಲಿ ಈ ರೀತಿಯಾಗಿ ಮದುವೆ ಮಾಡಿಕೊಳ್ಳುವುದೂ ಇಂದಿನ ಫ್ಯಾಷನ್ ಆಗಿದೆ. ಭಾರತದಲ್ಲಿಯೂ ಡೆಸ್ಟಿನೇಶನ್ ವೆಡ್ಡಿಂಗ್ ಸ್ಥಳಗಳು ಸಾಕಷ್ಟಿವೆ.

ಮದುವೆ ಸೀಸನ್‌ನಲ್ಲಿ ಕಲ್ಯಾಣ ಮಂಟಪಗಳೂ ಒಂದು ವರ್ಷ, ಆರು ತಿಂಗಳು ಮೊದಲೇ ಬುಕ್ ಆಗಿಬಿಟ್ಟಿರುತ್ತವೆ. ಆದ್ದರಿಂದ ಮದುವೆ ದಿನಾಂಕ ನಿಗದಿಯಾಗುತ್ತಿದ್ದಂತೆ ಯಾವ ಸ್ಥಳದಲ್ಲಿ ಮದುವೆ ಮಾಡಬಹುದು ಎಂದು ಗೊತ್ತುಮಾಡಿ ಸ್ಥಳವನ್ನು ಮುಂಗಡವಾಗಿ ಬುಕ್‌ಮಾಡಿಕೊಳ್ಳುವುದು ಉಚಿತ.




ಮದುವೆಗೆ ಸ್ಥಳ ಆಯ್ಕೆ ಮಾಡುವಾಗ ಮೊದಲು, ಎಷ್ಟು ಜನ ಹಿಡಿಯುತ್ತಾರೆ, ಪಾರ್ಕಿಂಗ್ ವ್ಯವಸ್ಥೆ ಇದೆಯಾ, ಮ್ಯಾನೇಜ್‌ಮೆಂಟ್‌ನಿಂದ ಏನೆಲ್ಲಾ ವ್ಯವಸ್ಥೆ ಸಿಗುತ್ತದೆ, ರೂಮುಗಳು ಚೆನ್ನಾಗಿವೆಯಾ, ಊಟದ ವ್ಯವಸ್ಥೆಗೆ ಬೇಕಾಗುವಷ್ಟು ಜಾಗ ಲಭ್ಯವಿದೆಯಾ ಇಂಥ ಕೆಲವು ಸೂಕ್ಷ್ಮಗಳನ್ನು ಮೊದಲೇ ಗ್ರಹಿಸಿ. ಇದರಿಂದ ಕೊನೆಯ ಕ್ಷಣದಲ್ಲಿ ಆಗುವ ತೊಂದರೆಗಳು ತಪ್ಪುತ್ತವೆ.

'ಮೊದಲೇ ಸ್ಥಳ ಬುಕ್ ಮಾಡಿದರೆ ಕಡಿಮೆ ಬೆಲೆಯಲ್ಲಿ ನೀಡುವ ಪರಿಕಲ್ಪನೆ ಇತ್ತೀಚೆಗೆ ಕಡಿಮೆ ಆಗಿದೆ. ಯಾವಾಗ ಬಂದು ಬುಕ್ ಮಾಡಿದರೂ ಒಂದೇ ರೇಟ್ ನಮ್ಮಲ್ಲಿ ಇದೆ. ತಿಂಗಳಲ್ಲಿ ಯಾವುದೋ ಒಂದೆರಡು ಮುಹೂರ್ತ ತುಂಬಾ ಚೆನ್ನಾಗಿರುತ್ತದೆ. ಇಂಥ ಸಂದರ್ಭಗಳಲ್ಲಿ ಸಹಜವಾಗಿಯೇ ದರ ಜಾಸ್ತಿ ಇರುತ್ತದೆ. ಇನ್ನು ವಾರಾಂತ್ಯಗಳಲ್ಲಿ ದರ ಹೆಚ್ಚಿರುತ್ತದೆ. ಮದುವೆಯಲ್ಲಿ ಭಾಗವಹಿಸುವ ಜನ ಎಷ್ಟು? ಎಷ್ಟು ಗ್ರ್ಯಾಂಡ್ ಹಾಲ್ ಬೇಕು? ಎನ್ನುವುದರ ಮೇಲೆ ಸ್ಥಳ ಆಯ್ಕೆ ಮಾಡಿಕೊಳ್ಳಬೇಕು' ಎಂದು ಮಾಹಿತಿ ನೀಡುತ್ತಾರೆ 'ಚಂದ್ರಗಿರಿ ಪ್ಯಾಲೇಸ್ ಪಾರ್ಟಿ ಹಾಲ್'ನ ವ್ಯವಸ್ಥಾಪಕರು.

'ಊಟ, ಡೆಕೋರೇಶನ್, ಫೋಟೊಗ್ರಫಿ, ವಿಡಿಯೊ, ಆಲ್ಬಂ, ಹಾರ, ನಾದಸ್ವರ, ಹುಡುಗ ಹುಡುಗಿ ಎಂಟ್ರಿ ಹೇಗಿರಬೇಕು, ಶಾಸ್ತ್ರದ ಸಂದರ್ಭದಲ್ಲಿ ಬೇಕಾಗುವ ಕೆಲ ಮುಖ್ಯ ವ್ಯವಸ್ಥೆ — ಎಲ್ಲವೂ ನಮ್ಮಲ್ಲಿಯೇ ಮಾಡಲಾಗುತ್ತದೆ. ಕುದುರೆ